## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶಿಡ್ಲಘಟ್ಟ

## ಸಿ ಸಿ ನಂ.219/2015

ಸಿ ಡಬ್ಲ್ಯು.. 2
ಪಿ ಡಬ್ಲ್ಯು.. 1

ಸಾಕ್ಷಿದಾರರ ಹೆಸರು ... ಚೆಲುವರಾಜು

ತಂದೆಯ ಹೆಸರು ... ವೆಂಕಟರಾಮಪ್ಪ

ವಯಸ್ಸು ... 38 ವರ್ಷ

ಉದ್ಯೋಗ ... ಶಿಕ್ಷಕ

ವಾಸ ... ಕೋಟೆ, ಶಿಡ್ಲಘಟ್ಟ

ಪ್ರಮಾಣವಚನದ ನಂತರದ ದಿಃ 14.03.2024

ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ-

ಚಾಸಾ.1 ಮತ್ತು 3 ರಿಂದ 5 ರವರ ಪರಿಚಯ ಇರುತ್ತದೆ. ನನಗೆ ಆರೋಪಿತರ ಪರಿಚಯ ಇದೆ. ನಾನು, ಚಾಸಾ.1, 3 ರಿಂದ 5 ರವರು ಜಂಗಮಕೋಟೆಯ ಜ್ಯೋತಿ ಆಂಗ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿಃ11.08.2014 ರಂದು ಆರೋಪಿತರು ಬೆ.11.30 ಗಂಟೆ ಸಮಯದಲ್ಲಿ ಜೆಸಿಬಿಯನ್ನು ತೆಗೆದುಕೊಂಡು ಬಂದು ನಮ್ಮ ಶಾಲೆಯ ಪಕ್ಕದಲ್ಲಿ ಮಣ್ಣನ್ನು ತೆಗೆಸುತ್ತಿದ್ದು, ಚಾಸಾ.5 ರವರು ಅದನ್ನು ಪ್ರಶ್ನಿಸಿದ್ದು ಆರೋಪಿತರು ಚಾಸಾ.5 ರವರ ಜೊತೆ ಜಗಳ ತೆಗೆದು ಅವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಸದರಿ ವಿಚಾರವನ್ನು ಚಾಸಾ.5 ರವರು ಚಾಸಾ.1 ರವರಿಗೆ ತಿಳಿಸಿರುತ್ತಾರೆ. ನಂತರ ವಿಚಾರ ತಿಳಿದು ನಾನು, ಚಾಸಾ.1,3, 4, 5 ರವರು ಆರೋಪಿತರನ್ನು ಪ್ರಶ್ನಿಸಿದಾಗ ಆರೋಪಿತರು ಇದು ನಮ್ಮ ಜಾಗ ನಿಮಗೆ ಇದು ಸಂಬಂದಿಸಿದ್ದಲ್ಲ ಎಂದು ನಮಗೆಲ್ಲ ಅವ್ಯಾಚ್ಯ ಶಬ್ದಗಳಿಂದ ಬೈದು ಶಾಲೆಯ ಒಳಗೆ ಪ್ರವೇಶ ಮಾಡಲು ಪ್ರಯತ್ನ ಪಟ್ಟಿದ್ದು ಆಗ ನಾವು ಅವರನ್ನು ತಡೆದಿರುತ್ತೇವೆ. ಆರೋಪಿತರು ನನಗೆ, ಚಾಸಾ.1, 3 ರಿಂದ 5 ರವರಿಗೆ ನಾವು ದೇವನಹಳ್ಳಿ ಇಂದ ರೌಡಿಗಳಾಗಿದ್ದು ನಿಮ್ಮನ್ನೆಲ್ಲಾ ಸಾಯಿಸುತ್ತೇವೆ ಎಂದು ಪ್ರಾಣ ಬೆದರಿಕೆಯನ್ನು ಸಹ ಹಾಕಿರುತ್ತಾರೆ. ಸದರಿ ಜಗಳವನ್ನು ಅಲ್ಲಿಯೇ ಇದ್ದ ಕೆಲ ಸಾರ್ವಜನಿಕರು ಬಿಡಿಸಿರುತ್ತಾರೆ. ಆ ದಿನ ನನ್ನ ಮೇಲೆ ಗಲಾಟೆ ಮಾಡಿದ

ಎಲ್ಲಾ ಆರೋಪಿತರು ಈ ದಿನ ಹಾಜರರಿರುತ್ತಾರೆ. ಘಟನ ಸಂಬಂದ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವೈಎಎಸ್ ರವರಿಂದ -

ಚಾಸಾ.**3** ಮತ್ತು **4** ರವರು ನಾನು ಕೆಲಸ ಮಾಡುತ್ತಿರುವ ಶಾಲೆಯ ಮಾಲೀಕರು ಎಂದರೆ ಸರಿ. ಚಾಸಾ.**6** ಮತ್ತು **7** ರವರು ಚಾಸಾ.**3** ಮತ್ತು **4** ರವರಿಗೆ ಪರಿಚಯಸ್ಥರು ಎಂದರೆ ಸರಿ ಅಲ್ಲ. ನಮ್ಮಶಾಲೆಯ ಪಕ್ಕದಲ್ಲಿ ಒಂದು ಲೇಔಟ್ ಇದೆ ಎಂದರೆ ಸರಿ. ಮೊದಲು ರಸ್ತೆ, ನಂತರ ಸ್ಮಶಾನ ಹಾಗೂ ಅದರ ನಂತರ ನಮ್ಮ ಶಾಲೆ ಬರುತ್ತದೆ ಎಂದರೆ ಸರಿ ಅಲ್ಲ. ಸಾಕ್ಷಿ ಈಗ ಸದರಿ ರಸ್ತೆ ಹಾಗೂ ಸ್ಮಶಾನ ನಿರ್ಮಾಣ ಗೊಂಡಿದ್ದು, ಮೊದಲು ಘಟನೆಯ ಸಮಯದಲ್ಲಿ ಸದರಿ ಸ್ಥಳಗಳು ಖಾಲಿ ಸ್ಥಳಗಳಾಗಿತ್ತು ಎಂದು ಹೇಳುತ್ತಾರೆ. ಸದರಿ ಖಾಲಿ ಸ್ಥಳ ಖಾಸಗಿ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತು ದೇವನಹಳ್ಳಿಯ ಗೋಪಿ ಎನ್ನುವವರಿಗೆ ಸೇರಿದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಗೋಪಿ ಎನ್ನುವವರಿಂದ **1** ನೇ ಆರೋಪಿ ಸದರಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾಲಿ ಜಾಗವನ್ನು ನಮ್ಮ ಶಾಲೆಯವರು ಮಕ್ಕಳ ದೈಹಿಕ ಚಟುವಟಿಕೆಗಾಗಿ ಬಳಸುತ್ತಿದ್ದರು ಎಂದರೆ ಸರಿ. ಸದರಿ ಹಾಲಿ ಸ್ಥಳವನ್ನು **1** ನೇ ಆರೋಪಿ ಕರೀನಿ ಮಾಡಿದ ನಂತರ ಲೇಔಟಾಗಿ ಪರಿವರ್ತಿಸಿ ಕಾಂಪೌಂಡನ್ನು ಸಹ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಶಾಲೆಯ ಪಕ್ಕದಲ್ಲಿ ಕಾಂಪೌಂಡ್ ಇರುತ್ತದೆ ಎಂದರೆ ಸಾಕ್ಷಿ ಘಟನ ಸಮಯದಲ್ಲಿ ಸದರಿ ಕಾಂಪೌಂಡ್ ಇರಲಿಲ್ಲ ಈಗ ಇರುತ್ತದೆ ಎಂದು ಹೇಳುತ್ತಾರೆ.

ಚಾಸಾ.**3** ಮತ್ತು **4** ರವರ ಸಮಕ್ಷಮ ಶಾಲೆಯ ಜಾಗ ಹಾಗೂ ಖಾಲಿ ಜಾಗವನ್ನು ಸರ್ವೆಯ ಮುಖಾಂತರ ಸರ್ವೆ ಮಾಡಿಸಲಾಗಿರುತ್ತದೆ ಎಂದರೆ ಸರಿ. ಈಗ ಶಾಲೆಯ ಸುತ್ತ ಕಾಂಪೌಂಡ್ ನಿರ್ಮಾಣ ಮಾಡಲಾಗಿರುತ್ತದೆ ಎಂದರೆ ಸರಿ. ಹಾಗೂ ಸದರಿ ಲೇಔಟಿನ ಸುತ್ತ ಕಾಂಪೌಂಡ್ ನಿರ್ಮಾಣ ಮಾಡಲಾಗಿರುತ್ತದೆ ಎಂದರೆ ಸರಿ. ಚಾಸಾ.**3** ಮತ್ತು **4** ರವರು ಶಾಲೆಯ ಜಾಗೂ ಖಾಲಿ ಜಾಗವನ್ನು ಯಾವಾಗ ಸರ್ವೆ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲಲ. **1** ನೇ ಆರೋಪಿ ರವರು ತಮ್ಮ ಸ್ವತ್ತಿನಲ್ಲಿ ಕಾಂಪೌಂಡನ್ನು ನಿರ್ಮಾಣ ಮಾಡುತ್ತಿದ್ದಾಗ ಶಾಲೆಗೆ ಜಾಗ ಕಮ್ಮಿ ಆಗುತ್ತದೆ ಕಾಂಪೌಂಡನ್ನು ನಿರ್ಮಿಸಬೇಡಿ ಎಂದು ಚಾಸಾ.**3** ಮತ್ತು **4** ರವರು ಹೇಳಿರುತ್ತಾರೆ

ಎಂದರೆ ನನಗೆಗೊತ್ತಿಲ್ಲ. ಕಾಂಪೌಂಡನ್ನು ನಿರ್ಮಾಣ ಮಾಡಿದ ನಂತರ ನಮ್ಮ ಶಾಲೆಯವರಿಗೂ **1** ನೇ ಆರೋಪಿಗೂ ವಿಶ್ವಾಸ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಶಾಲೆಯ ಪಕ್ಕದಲ್ಲಿ ಶಾಲೆಗೆ ಸೇರಿರುವ ಒಂದು ಗ್ಯಾಸ್ ಗೋಡನ್ ಇದೆ ಎಂದರೆ ಸರಿ. ಶಾಲೆ ಇರುವುದರಿಂದ ಸದರಿ ಗ್ಯಾಸ್ ಗೋಡನ್ ಇರಬಾರದು ಎಂದು ಹೇಳಿ **1** ನೇ ಆರೋಪಿ ಅರ್ಜಿಯನ್ನು ಸಲ್ಲಿಸಿ ಸದರಿ ಗೋಡನನ್ನು ತೆಗೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ಸದರಿ ಗೋಡನ್ ಇರುವುದಿಲ್ಲ ಎಂದರೆ ಸರಿ. ಸದರಿ ಗೋಡನನ್ನು ? **1** ನೇ ಆರೋಪಿ ತೆಗೆಸಿದರಿಂದ ಆರೋಪಿಗಳಿಗೆ ನಮ್ಮ ಶಾಲೆಯವರಿಗೆ ಆಗಿ ಬರುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

**3.** ಆರೋಪಿಗಳು ತಮ್ಮ ಜಾಗದಲ್ಲಿ ಜೆಸಿಬಿ ಇಂದ ಮಣ್ಣನ್ನು ತೆಗೆಸುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಶಾಲೆಯ ಪಕ್ಕದಲ್ಲೇ ಮಾಡಿಸುತ್ತಿದ್ದರು ಎಂದು ಹೇಳುತ್ತಾರೆ. ಗಲಾಟೆಯ ಸಮಯದಲ್ಲಿ ನಮ್ಮ ಶಾಲಾ ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎಂದರೆ ಸರಿ. ಗಲಾಟೆ ಬಿಡಿಸಿದ ಸಾರ್ವಜನಿಕರ ಹೆಸರು ನನಗೆ ಗೊತ್ತಿಲ್ಲ. ಗಲಾಟೆಯ ಸಮಯದಲ್ಲಿ ಆರೋಪಿತರ ಹೆಸರು ನನಗೆ ಗೊತ್ತಿಲ್ಲ. ಆರೋಪಿಗಳನ್ನು ನಾನು ಇದೇ ಮೊದಲನೇ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ಘಟ ನೆಯ ಸಮಯದಲ್ಲಿ ನೋಡಿರುವುದಾಗಿ ಹೇಳುತ್ತಾರೆ. ಆರೋಪಿಗಳು ನನಗೆ ಚಾಸಾ.**1,** ಚಾಸಾ.**3** ರಿಂದ **5** ರವರಿಗೆ ಅವ್ಯಾಚ್ಯ ಶಬ್ದಗಳಿಂದ ನ್ಯಾಯಾಲಯದಲ್ಲಿರುವ ಆರೋಪಿಗಳು ಬೈದಿರುವುದಿಲ್ಲ ಆದರೆ ಅವರ ಜೊತೆ ಒಬ್ಬ ವ್ಯಕ್ತಿ ಇದ್ದು ಆತ ಬೈದಿರುತ್ತಾರೆ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಆತನ ಹ ಹೆಸರು ನನಗೆ ಗೊತ್ತಿಲ್ಲ. ಯಾವುದೇ ಗಲಾಟೆ ನಡೆಯದೇ ಇದ್ದರೂ ಸಹ ಚಾಸಾ.**3** ಮತ್ತು **4** ರವರ ಮಾತನ್ನು ಕೇಳಿಕೊಂಡು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ನನಗೆ ಚಾಸಾ. **1** ಮತ್ತು **3** ರಿಂದ **5** ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಹಾಗೂ ಯಾವುದೇ ಪ್ರಾಣ ಬೆದರಿಕೆಯನ್ನು ಹಾಕಿರುವುದಿಲ್ಲ ಎಂದರೆ ಸರಿ ಅಲ್ಲ. ಆರೋಪಿಗಳು ಬೆಂಗಳೂರಿನವರಾಗಿದ್ದು ಅವರನ್ನು ಇದೆ ಮೊದಲನೇ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ ಅಲ್ಲ. ಪೋಲೀಸರಿಗೆ ನಾನು ಹೇಳಿಕೆಯನ್ನು ಘಟನೆ ನಡೆದ **15** ದಿನಗಳ ಬಳಿಕ ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಾನು ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ನೀಡಿರುತ್ತೇನೆ. ನಮ್ಮ ಶಾಲೆಯ **100**

ಮೀಟರ್ ಅಂತರದಲ್ಲಿ ಪೋಲೀಸ್ ಠಾಣೆ ಇರುತ್ತದೆ ಎಂದರೆ ಸರಿ. ಸ್ಕೂಲಿನ ದಕ್ಷಿಣದ ಕಡೆ ಸ್ಮಶಾನದ ಜಾಗ ಬರುತ್ತದೆ ಹಾಗೂ ಪಶ್ಚಿಮದ ಕಡೆಗೆ 1 ನೇ ಆರೋಪಿಯ ಸ್ವತ್ತು ಇರುತ್ತದೆ ಎಂದರೆ ಸರಿ. ಘಟನೆ ಬಗ್ಗೆ ಮಾತ್ರ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಅದರಲ್ಲಿ ನಾನು ಗಲಾಟೆ ಮಾಡಿದ ವ್ಯಕ್ತಿಗಳ ಹೆಸರನ್ನು ಹೇಳಿರುತ್ತೇನೆ. ನಾನು ಆರೋಪಿಗಳನ್ನು ಹೊರತುಪಡಿಸಿ ಬೇರೆ ಯಾರ ಹೆಸರನ್ನು ಹೇಳಿಕೆಯಲ್ಲಿ ನೀಡಿಲ್ಲ ಎಂದರೆ ಸರಿ ಅಲ್ಲ. ಸಾಕ್ಷಿ ಘಟನೆ ನಡೆದಾಗ ಆರೋಪಿಗಳು 5 ಜನ ಇದ್ದರು ಎಂದು ಹೇಳುತ್ತಾರೆ. ಚಾಸಾ.3 ರವರು ಮೊದಲು ಜಂಗಮಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಸದರಿ ರಾಜಕೀಯ ಪ್ರಭಾವವನ್ನು ಬೆಳೆಸಿಕೊಂಡು ಆರೋಪಿಯ ಮೇಲೆ ಸುಳ್ಳುದೂರನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿ ಅಲ್ಲ. 1 ನೇ ಆರೋಪಿಗೆ ಸೇರಿದ ಜಾಗವನ್ನು ಕಬಳಿಸುವ ಸಲುವಾಗಿ ಈ ಸುಳ್ಳು ಪ್ರಕರಣವನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು.)

ಓ ಹೇ ಕೇ ಸ ಇದೆ.

ಪ್ರಧಾನ ಸಿ. ನ್ಯಾ. ಮತ್ತು
ಜೆಎಂಎಫ್, ಶಿಡ್ಲಘಟ್ಟ